ಮಯೂರ ವಿಶೇಷ

# ಬೇಂದ್ರೆ ಬರೆಯದ ಪುಸ್ತಕಗಳು



**ದೇವು ಪತ್ತಾರ**

'ಬೇಂದ್ರೆ ಬರೆಯದ ಪುಸ್ತಕಗಳು' – ಯಾಕೋ ಈ ವಾಕ್ಯ ಸರಿಯಿಲ್ಲ ಎನ್ನಿಸುತ್ತಿದೆ ಅಲ್ಲವೇ? ಹೌದು. ಅದು ಸರಿ. ಒಬ್ಬ ಲೇಖಕ ಅಥವಾ ಕವಿ ಬರೆಯದೇ ಇರುವ ಪುಸ್ತಕದ ಬಗ್ಗೆ ನಮಗೆ ಹೇಗೆ ಗೊತ್ತಾಗಲು ಸಾಧ್ಯ? ಕವಿಪುತ್ರ ವಾಮನ ಬೇಂದ್ರೆ ಅಥವಾ ಬೇಂದ್ರೆಯವರ ಸಹಚರರಾಗಿದ್ದ ಆಪ್ತರು ಪ್ರಸ್ತಾಪಿಸುವಂತೆ, ಕವಿಯು 'ಕನಸಲ್ಲಿ ಬಂದು' ಹೇಳಿದ/ಹೇಳುವ ಹಾಗಿದ್ದರೆ ಮಾತ್ರ ಗೊತ್ತಾಗಲು ಸಾಧ್ಯ. ನನಗೆ ಅಥವಾ ನನ್ನಂತಹವರಿಗೆ ಆ 'ಭಾಗ್ಯ' ಇಲ್ಲ. ಹಾಗಿದ್ದರೆ 'ಬೇಂದ್ರೆಯವರು ಪ್ರಕಟಿಸದ ಪುಸ್ತಕಗಳು' ಎಂಬುದು ಸರಿಯಾದ ವಾಕ್ಯ ಆಗಬಹುದೇ? ಈ ವಾಕ್ಯ ಸ್ವಲ್ಪಮಟ್ಟಿಗೆ ಸರಿ ಎನ್ನಿಸಬಹುದು. ಯಾಕೆಂದರೆ, ಬರೆದು, ಆದರೆ ಪ್ರಕಟಣೆಯ ಭಾಗ್ಯ ಕಾಣದೇ ಇರುವ ಪುಸ್ತಕಗಳನ್ನು ಈ ಪಟ್ಟಿಗೆ ಸೇರಿಸಬಹುದು. ಹೌದು. ಅಂತಹ ಶೀರ್ಷಿಕೆಗಳೂ ಬೇಂದ್ರೆಯವರ ಪುಸ್ತಕಗಳ ಪಟ್ಟಿಯಲ್ಲಿವೆ. ಹಾಗೆಯೇ ಬರೆಯಲು ಬಯಸಿ ಬರೆದು–ಬರೆಯದೇ–ಪ್ರಕಟಿಸದೇ ಇರುವ ಪುಸ್ತಕಗಳ ಸಂಖ್ಯೆಯೂ ಕಡಿಮೆಯೇನಿಲ್ಲ. ಈ ಲೇಖನವು ವಿವಿಧ ಆಕರಗಳ ಆಧಾರದ ಮೇಲೆ ಬೇಂದ್ರೆಯವರು ಬರೆಯಲು ಬಯಸಿ ಬರೆಯದ ಹಾಗೂ ಬರೆದು ಪ್ರಕಟಿಸದ ಪುಸ್ತಕಗಳ ಬಗ್ಗೆ ಮಾತನಾಡಲು ಬಯಸುತ್ತದೆ.

ಕನ್ನಡ ಸಾಹಿತ್ಯದಲ್ಲಿ ಆಸಕ್ತರಾಗಿರುವವರಿಗೆ ಕವನಗಳನ್ನು ಬರೆದ 'ಕವಿ ಬೇಂದ್ರೆ' ಬಹುತೇಕ ಚಿರಪರಿಚಿತ. ಮತ್ತೂ ಒಂದು ಹೆಜ್ಜೆ ಮುಂದು ಹೋಗಿ ಬೇಂದ್ರೆ